# ಶ್ರೀಮಾತೆಯವರೊಡನೆ ಮಾತುಕತೆ

### ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು



೩೧.೧.೧೯೧೩

ನನ್ನ ಜೊತೆಗೆ ಬಂದಿದ್ದ ಮಹಿಳೆ ಮತ್ತು ನಳಿನಿ ಇಬ್ಬರೂ ತಮ್ಮ ಗಂಡಂದಿರ ಮನೆಯಲ್ಲಿ ವಾಸ ಮಾಡುತ್ತಿಲ್ಲ. ಮಾತಿನ ಮಧ್ಯೆ ಅವರ ವಿಷಯ ಬಂದಾಗ ಶ್ರೀಮಾತೆ ಹೇಳಿದರು, "ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಸ್ತ್ರೀ, ಗೋ ಮತ್ತು ಧನ – ಇವು ಯಾವಾಗಲೂ ನಮ್ಮ ಆಶ್ರಯದಲ್ಲೇ ಇರಬೇಕು. ಸಸಿಯನ್ನು ಬೇಲಿಯಿಂದ ರಕ್ಷಿಸದಿದ್ದರೆ ಕುರಿಮೇಕೆಗಳ ಆಹಾರವಾಗುತ್ತದೆ." ಮಧ್ಯಾಹ್ನ ಊಟವಾದ ಮೇಲೆ ಎಲ್ಲರೂ ಪಕ್ಕದ ಕೋಣೆಯಲ್ಲಿ ವಿಶ್ರಮಿಸಲು ಹೊರಟರು. ಈ ಹುಡುಗಿಗೂ ಶ್ರೀಮಾತೆ ವಿಶ್ರಮಿಸಲು ಹೇಳಿದರು. "ಊಹ್ಞು, ನಾನು ಮಧ್ಯಾಹ್ನದ ಹೊತ್ತು ಮಲಗುವುದಿಲ್ಲ" ಎಂದಳು. ನಾನೆಂದೆ, "ಶ್ರೀಮಾತೆ ಹೇಳಿದ ಮೇಲೆ ಕೇಳಲೇಬೇಕು". "ಸರಿ ಹಾಗಾದರೆ" ಎಂದು ಸ್ವಲ್ಪ ಹೊತ್ತು ಮಲಗಿ ತಕ್ಷಣ ಎದ್ದು ವರಾಂಡಾದ ಕಡೆ ಹೋದಳು. "ಚಂಚಲೆ, ಆದ್ದರಿಂದಲೇ ಓಡಿದಳು" ಎಂದರು ಶ್ರೀಮಾತೆ.

ಅವಳ ಸೇವಕಿಯನ್ನು ಶ್ರೀಮಾತೆ ವಿಚಾರಿಸಿದರು, "ಆ ಹುಡುಗಿಯ ಗಂಡ ಏನು ಮಾಡುತ್ತಾನೆ? ತನ್ನ ಬಳಿ ಏಕೆ ಇಟ್ಟುಕೊಂಡಿಲ್ಲ?"

ಆ ಸೇವಕಿ ಹೇಳಿದಳು, ಆತ ಬಹಳ ಕಡಿಮೆ ಹಣ ದುಡಿಯುತ್ತಾನೆ. ಮೇಲಾಗಿ ಮನೆಯಲ್ಲಿ ಒಬ್ಬಳನ್ನೇ ಹೇಗೆ ಬಿಟ್ಟಿರುವುದು? ಆದ್ದರಿಂದ ಪ್ರತಿ ಶನಿವಾರ ಮಾವನ ಮನೆಗೆ ಬರುತ್ತಾನೆ.

**ಅನ್ನಪೂರ್ಣಳ ತಾಯಿ :** ತನ್ನ ಪತಿಗೆ ಆಕೆ, 'ನೀವು ಯಾವೂರ ಗಂಡ ನನಗೆ?! ಜಗತ್ತಿನ ಪತಿಯೆ ನನ್ನ ಪತಿ' ಎಂದು ಹೇಳುತ್ತಾಳೆ.

ಶ್ರೀಮಾತೆ ಏನೂ ಹೇಳಲಿಲ್ಲ. ದೇವರ ಮನೆಯ ಉತ್ತರದ ವರಾಂಡಾದಲ್ಲಿ ಹೆಂಗಸರು ಕುಳಿತು ಮಾತನಾಡುತ್ತಿದ್ದರು. ಬಹಳ ಗದ್ದಲವಾಗುತ್ತಿತ್ತು.

**ಶ್ರೀಮಾತೆ :** ಅವರಿಗೆ ಹೇಳು, ಮೆಲ್ಲಗೆ ಮಾತನಾಡುವಂತೆ. ಶರತ್ ನಿದ್ದೆಯಿಂದ ಈಗಲೇ ಎದ್ದುಬಿಟ್ಟಾನು.

ಬೇರೆ ಯಾರೂ ಇಲ್ಲದಿದ್ದಾಗ ನಾನು ಸಾಧನೆ, ಭಜನೆಯ ಬಗ್ಗೆ ಶ್ರೀಮಾತೆಯವರ ಬಳಿ ಕೇಳಿದೆ. ಅವರು, "ಶ್ರೀರಾಮಕೃಷ್ಣರು ಮತ್ತು ನನ್ನಲ್ಲಿ ಭೇದ ಮಾಡಬೇಡ. ಯಾವಾಗ ಯಾವ ರೀತಿ ದರ್ಶನ ಪಡೆಯುವೆಯೊ ಅದಕ್ಕೆ ಅನುಸಾರವಾಗಿ ಧ್ಯಾನ ಮಾಡು. ಧ್ಯಾನದ ನಂತರ ಪೂಜೆ ಮುಗಿದಂತೆಯೇ. ಇಲ್ಲಿಂದ (ಎದೆ) ಶುರು ಮಾಡಿ ಇಲ್ಲಿಗೆ (ತಲೆ) ಮುಗಿಸು" ಎಂದು ಹೇಳಿ ತೋರಿಸಿಕೊಟ್ಟರು. ಮುಂದುವರಿಸುತ್ತಾ, "ಮಂತ್ರಗಿಂತ್ರ ಎಲ್ಲಾ ಏನೂ ಎಲ್ಲ. ಭಕ್ತಿಯೇ ಸಾರ. ಶ್ರೀರಾಮಕೃಷ್ಣರಲ್ಲೇ ಗುರು, ಇಷ್ಟ – ಎಲ್ಲವನ್ನೂ ಪಡೆಯುವೆ. ಅವರೇ ಎಲ್ಲವೂ" ಎಂದು ಹೇಳಿದರು.

ಮಾತಿನ ಮಧ್ಯದಲ್ಲಿ ಗೌರೀ ಮಾ ಮತ್ತು ದುರ್ಗಾದಾಸಿಯರ ಪ್ರಸಂಗ ಬಂತು. ಶ್ರೀಮಾತೆ ಅವರಿಬ್ಬರನ್ನೂ ತುಂಬಾ ಹೊಗಳಿದರು. ಶ್ರೀಮಾತೆ, "ನೋಡು, ಜೀವನದಲ್ಲಿ ಏಟು ತಿಂದು ಜನರು ರಾಮನಾಮದ ದಾರಿ ಹಿಡಿಯುತ್ತಾರೆ. (ಅಧ್ಯಾತ್ಮದ ಕಡೆ ತಿರುಗುತ್ತಾರೆ). ಆದರೆ ಯಾರು ಚಿಕ್ಕಂದಿನಿಂದಲೇ ಕುಸುಮದಂತೆ ಭಗವಂತನ ಪಾದಪದ್ಮದಲ್ಲಿ ಅರ್ಪಿಸಲ್ಪಡುತ್ತಾರೋ ಅವರೇ ಧನ್ಯರು. ಆ ಹುಡುಗಿ (ದುರ್ಗಾದಾಸಿ) ಯಾರೂ ಮುಟ್ಟದ ಹೂವಿನಂತೆ. ಗೌರಿದಾಸಿ ಎಷ್ಟು ಚೆನ್ನಾಗಿ ಆ ಹುಡುಗಿಯನ್ನು ಬೆಳೆಸಿದ್ದಾಳೆ! ಅವಳ ತಮ್ಮಂದಿರು ಅವಳ ಮದುವೆಗಾಗಿ ಬಹಳ ಪ್ರಯತ್ನಪಟ್ಟರು. ಗೌರಿದಾಸಿ ಅವಳನ್ನು ಅಲ್ಲಿ ಇಲ್ಲಿ ಬಚ್ಚಿಟ್ಟು ಕೊನೆಗೆ ಪುರೀ ಕ್ಷೇತ್ರಕ್ಕೆ ಕರೆದೊಯ್ದಳು. ಅಲ್ಲಿ ಜಗನ್ನಾಥನ ಜೊತೆ ಹಾರ ಬದಲಿಸಿ (ಆತನನ್ನೇ ಪತಿಯೆಂದು ತಿಳಿದು) ಅವಳನ್ನು ಸಂನ್ಯಾಸಿಯನ್ನಾಗಿ ಮಾಡಿದಳು. ಅಪರಂಜಿಯಂತಹ ಹುಡುಗಿ. ಎಷ್ಟು ಓದಿದ್ದಾಳೆ! ಯಾವುದೋ ಸಂಸ್ಕೃತ ಪರೀಕ್ಷೆಗೂ ಸಹ ಕುಳಿತಿದ್ದಾಳೆ ಎಂದು ಕೇಳಿದೆ" ಎಂದು ಅವಳ ಗುಣಗಾನ ಮಾಡಿದರು.

ಈ ಸಮಯದಲ್ಲೇ ಗೌರೀ ಮಾಳ ಪೂರ್ವಜೀವನದ ಕಷ್ಟ ಗಳ ಬಗ್ಗೆಯೂ ಸ್ವಲ್ಪ ತಿಳಿದೆ. ಕಾಶಿ ವಿಷಯವಾಗಿ ಹೇಳುತ್ತಾ ಶ್ರೀಮಾತೆಯವರು ಹೇಳಿದರು, "ಓ, ಕಾಶಿಯಲ್ಲಿ ಎಷ್ಟು ಚೆನ್ನಾಗಿ ಇದೆ. ನೋಡು, ನಾನು ಈ ಯದುವಂಶವನ್ನೂ (ಶ್ರೀಮಾತೆಯ ಪರಿವಾರ) ಸಹ ನನ್ನ ಜೊತೆ ಕರೆದುಕೊಂಡು ಹೋಗಿದ್ದೆ."

(*ಮುಂದುವರಿಯುವುದು*)